ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 21/02/2020

# ಸ್ಪೀಕರ್- ರಾಮಲಿಂಗಾರೆಡ್ಡಿ ವಾಕ್ಸಮರ!

## ನಿಯಮಾವಳಿ ಮೀರಿದರೆ ಕ್ರಮ: ವಿಶ್ವೇಶ್ವರ ಹೆಗಡೆ ಎಚ್ಚರಿಕೆ | ಡಿಕ್ಟೇಟ್ ಮಾಡಿದರೆ ಚೆನ್ನಾಗಿರಲ್ಲ: ಶಾಸಕ

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

'ಸ್ಪೀಕರ್ ಆದವರು ಆ ಸ್ಥಾನದ ಘನತೆ, ಗೌರವ ಉಳಿಸುವಂತೆ ವರ್ತಿಸಿ. ನಾನು ನಿಮಗಿಂತಲೂ ಸೀನಿಯರ್. ನನಗೆ ಡಿಕ್ಟೇಟ್ ಮಾಡಲು ಬರಬೇಡಿ. ಇದೇ ಕೊನೆ... ಇದನ್ನು ಮುಂದುವರೆಸಿದರೆ ಚೆನ್ನಾಗಿರುವುದಿಲ್ಲ.'



- ಹೀಗೆ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೇ ನೇರವಾಗಿ ಎಚ್ಚರಿಕೆ ನೀಡಿದ್ದು ಮಾಜಿ ಸಚಿವ ರಾಮಲಿಂಗಾರೆಡ್ಡಿ.

ಸದಾ ಶಾಂತ ಹಾಗೂ ಮೃದು ಭಾಷಿಕರಾಗಿಯೇ ಕಾಣಿಸಿಕೊಳ್ಳುವ ರಾಮಲಿಂಗಾರೆಡ್ಡಿ ಅವರು ಗುರುವಾರ ಸದನದಲ್ಲಿ ಏಕಾಏಕಿ ರೌದ್ರಾವತಾರಪ್ರದರ್ಶಿಸಿವಿಧಾನಸಭೆಸದಸ್ಯರನ್ನು ಅಚ್ಚರಿಗೆ ಗುರಿ ಮಾಡಿದರು. ರಾಜ್ಯಪಾಲರ ವಂದನಾರ್ಪಣೆ ನಿರ್ಣಯದ ಮೇಲೆ ಮಾತನಾಡಲು ರಾಮಲಿಂಗಾರೆಡ್ಡಿ, ಜೆಡಿಎಸ್ ಶಾಸಕ ಶಿವಲಿಂಗೇಗೌಡ ಅವಕಾಶ ಕೇಳಿದರು. ಈ ವೇಳೆ ಮೊದಲು ಶಿಸ್ತು ಪಾಲಿಸಿ. ನಾನು ಹೆಸರು ಕರೆದಾಗ ಮಾತನಾಡಿ ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು. ಆದರೂ, ಅವಕಾಶ ನೀಡುವಂತೆ ಶಿವಲಿಂಗೇಗೌಡ ಪಟ್ಟು ಹಿಡಿದರು.

ಆಗ ವಿಶ್ವೇಶ್ವರ ಹೆಗಡೆ ಕಾಗೇರಿ, ನಾನು ಹೆಸರು ಕರೆದವರು ಮಾತ್ರ ಮಾತನಾಡಿ. ನನಗೆ ಯಾರಿಗೆ ಅವಕಾಶ ಕೊಡಬೇಕು ಎನಿಸುತ್ತದೆಯೋ ಅವರ ಹೆಸರು ಕರೆಯುತ್ತೇನೆ. ನಿಯಮಾವಳಿ ಮೀರಿದರೆ ನಾನೇನು ಕ್ರಮ ಕೈಗೊಳ್ಳಬೇಕು ಎಂಬುದಕ್ಕೂ ನಿಯಮ ಇದೆ. ಅಪಾಯಕ್ಕೆ ಅವಕಾಶ ಕೊಡಬೇಡಿ ಎಂದು ಎಚ್ಚರಿಸಿದರು.

ಇದಕ್ಕೆ ಗರಂ ಆದ ರಾಮಲಿಂಗಾರೆಡ್ಡಿ, ಶಾಲಾ ಮಕ್ಕಳಿಗೆ ಹೆದರಿಸಿದಂತೆ ಹೆದರಿಸಲು ಬರಬೇಡಿ. ನಿಮ್ಮ ಮನಸ್ಸಿಗೆ ಯಾರಿಗೆ ಕೊಡಬೇಕು ಎನಿಸುತ್ತದೆಯೋ ಅವರಿಗೆ ಹೇಗೆ ಕೊಡುತ್ತೀರಿ ಎಂದು ಪ್ರಶ್ನೆ ಮಾಡಿದರು.

ವಿಶ್ವೇಶ್ವರ ಹೆಗಡೆ ಕಾಗೇರಿ, ಹೌದು. ನಾನು ಹೇಗೆ ನಡೆಸಬೇಕು ಎಂದು ನನಗೆ ನೀವು ಹೇಳಬೇಕಾಗಿಲ್ಲ. ನೀವು ಕುಳಿತುಕೊಳ್ಳಿ ಅಷ್ಟೇ ಎಂದು ಹೇಳಿದರು. ಈ ಮಾತಿಗೆ ಕ್ರುದ್ಧರಾದ ರಾಮಲಿಂಗಾರೆಡ್ಡಿ ಅವರು ಸ್ಪೀಕರ್ ಕಡೆಗೆ ತೋರು ಬೆರಳು ತೋರುತ್ತಾ, 'ನಾನು ನಿಮಗಿಂತಲೂ ಸೀನಿಯರ್ ಇದ್ದೀನಿ. ನನಗೆ ಡಿಕ್ಟೇಟ್ ಮಾಡಲು ಬರಬೇಡಿ. ನನಗೆ ಶಿಸ್ತು ಹೇಳಲು ಬರಬೇಡಿ. ಇದೇ ಕೊನೆ. ಇದನ್ನು ಮುಂದುವರೆಸಿದರೆ ಚೆನ್ನಾಗಿಲ್ಲ' ಎಂದರು.

**ಕ್ರಮ ಕೈಗೊಳ್ಳಬೇಕಾಗುತ್ತದೆ- ಕಾಗೇರಿ:** ಈ ವೇಳೆ ಸ್ಪೀಕರ್, ನೀವು ಈ ರೀತಿ ಮಾತನಾಡಿದರೆ ನಾನು ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಇದಕ್ಕೆ ಮತ್ತಷ್ಟು ಕ್ರುದ್ಧರಾದ ರಾಮಲಿಂಗಾರೆಡ್ಡಿ, 'ಏನು ಮಾಡುತ್ತೀರಿ? ಏನು ನನ್ನ ಹೆದರಿಸೋಕೆ ಬರುತ್ತೀರಾ?' ಎಂದು ಪ್ರಶ್ನಿಸಿದರು. ಈ ವೇಳೆ ಕಾಂಗ್ರೆಸ್ ಸದಸ್ಯರು ರಾಮಲಿಂಗಾರೆಡ್ಡಿ ಅವರ ಬಳಿ ಬಂದು ತಿಳಿ ಹೇಳುವ ಪ್ರಯತ್ನ ಮಾಡಿದರು. ನೀವೇ ಸದನ ಮಾಡಿಕೊಳ್ಳಿ ಎಂದು ಹೊರ ನಡೆದರು.



### ಸೌಮ್ಯಾರೆಡ್ಡಿಯಿಂದಲೂ ಆರೋಪ

ಬಳಿಕ ಜಯನಗರ ಶಾಸಕಿ ಸೌಮ್ಯಾರೆಡ್ಡಿ, ನೀವು ಯಾವಾಗಲೂ ನಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ಇಂದಿಗೆ ಎರಡನೇ ಅಧಿವೇಶನವೂ ಪೂರ್ಣಗೊಂಡಿದೆ. ನಮಗೆ ಎರಡೂ ಅಧಿವೇಶನದಿಂದ ಒಂದು ಸಲವಾದರೂ ಮಾತನಾಡಲು ಅವಕಾಶ ನೀಡಿಲ್ಲ. ಹೀಗೆ ಮಾಡಿದರೆ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.